**ದಿನಾಂಕ: 28.12.2013ರಂದು ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 5ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡಾವಳಿಗಳು**

**ಸಭೆಯಲ್ಲಿ ಹಾಜರಿದ್ದವರು**

| | | |
|---|---|---|
| 1. | ಸರ್ಕಾರದ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ),<br>ಕರ್ನಾಟಕ ಸರ್ಕಾರ, ಬೆಂಗಳೂರು. | ಅಧ್ಯಕ್ಷರು |
| 2. | ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ | ಸದಸ್ಯರು |
| 4. | ಮುಖ್ಯಆಡಳಿತಾಧಿಕಾರಿಗಳು (ಪ್ರಭಾರ)<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ | ಸದಸ್ಯರು |
| 5. | ವೈದ್ಯಕೀಯ ಅಧೀಕ್ಷಕರು,<br>ಬೋಧಕ ಆಸ್ಪತ್ರೆ,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ. | ಸದಸ್ಯರು |
| 6. | ಆರ್ಥಿಕ ಸಲಹೆಗಾರರು,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ. | ಸದಸ್ಯ ಕಾರ್ಯದರ್ಶಿಗಳು |

ಪ್ರಾರಂಭದಲ್ಲಿ ನಿರ್ದೇಶಕರು ಹಾಗೂ ಸದಸ್ಯರು, ಹಣಕಾಸು ಸಮಿತಿ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹಣಕಾಸು ಸಮಿತಿ ಸಭೆಯಲ್ಲಿ ಹಾಜರಿರುವ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು. ನಂತರ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು. ಸರ್ಕಾರದ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಣಕಾಸು ಸಮಿತಿ ಸಭೆಯ ಸಭಾಸೂಚಿ (ಅಜೆಂಡಾ)ಯನ್ನು ವಿಷಯವಾರು ಚರ್ಚೆಗೆ ತೆಗೆದುಕೊಳ್ಳಲು ಸೂಚಿಸಿದರು.

Roshni N.
07/01/14

**ವಿಷಯ ಸಂಖ್ಯೆ** : 01 ದಿನಾಂಕ:03.12.2012 ರಂದು ಜರುಗಿದ ಮಿಮ್ಸ್ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಅನುಪಾಲನಾ ವರದಿ.

ಹಿಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಕೈಗೊಂಡ ನಡವಳಿಗಳಿಗೆ ಅನುಪಾಲನಾ ವರದಿಯನ್ನು ಸಭೆಯಲ್ಲಿ ಓದಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ**:02 ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2013-14ನೇ ಸಾಲಿನ ಆರ್ಥಿಕ ಪರಿಸ್ಥಿತಿ ವಿವರ

**ತೀರ್ಮಾನ**:- 2013-14ನೇ ಸಾಲಿನ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಸಭೆಯ ಮುಂದೆ ವಿವರಿಸಲಾಯಿತು.

**ವಿಷಯ ಸಂಖ್ಯೆ**: 03 ಮಿಮ್ಸ್ ಸಂಸ್ಥೆಯ ಕಾಲೇಜು ಹಾಗೂ ಹೊಂದಿಕೊಂಡಿರುವ ಬೋಧಕ ಆಸ್ಪತ್ರೆಯಲ್ಲಿ ವೆಚ್ಚ ಭರಿಸುತ್ತಿರುವ ವೇತನ, ಕಛೇರಿ ವೆಚ್ಚ, ಕಟ್ಟಡ ಕಾಮಗಾರಿ, ಉಪಕರಣ ಖರೀದಿ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದಡಿಯಲ್ಲಿ ಭರಿಸಿರುವ ವೆಚ್ಚಗಳಿಗೆ ಆರ್ಥಿಕ ಸಮಿತಿಯ ಮುಂದೆ ಮಂಡಿಸಿ ಸ್ಥಿರೀಕರಣ ಕೋರುವ ಬಗ್ಗೆ.

**2210–05–105–1–40–101 (ಯೋಜನೆ)**

ರೂ. ಲಕ್ಷಗಳಲ್ಲಿ

| ಕ್ರ ಸಂ | ವಿವರಣೆ | ವೆಚ್ಚಗಳು ದಿನಾಂಕ:01.11.2012ರಿಂದ 31.03.2013ರವರೆಗೆ |
|---|---|---|
| 01 | ವೇತನ | 195.52 |
| 02 | ಕಛೇರಿ ವೆಚ್ಚ | 40.68 |
| 03 | ಉಪಕರಣ | 3.33 |
| 04 | ಪೀಠೋಪಕರಣ | --- |
| 05 | ಗ್ರಂಥ ಭಂಡಾರ | 3.19 |
| 06 | ಕಟ್ಟಡ ಕಾಮಗಾರಿ | 59.62 |
| 07 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಉಪಯೋಜನೆಯಡಿ | 36.74 |
| | **ಒಟ್ಟು** | **338.98** |

ಮಿಮ್ಸ್ ಸಂಸ್ಥೆಯ ಬೋಧಕ ಸಿಬ್ಬಂದಿಯವರ ಎ.ಐ.ಸಿ.ಟಿ.ಇ ವೇತನ ಪಾವತಿ (ಯೋಜನೇತರ) 2013–14ನೇ ಸಾಲಿನ ವೆಚ್ಚದ ವಿವರ ಲೆಕ್ಕ ಶೀರ್ಷಿಕೆ 2210–05–105–1–47–101 (ಯೋಜನೇತರ)

ರೂ. ಲಕ್ಷಗಳಲ್ಲಿ

Roshni 07.01.14

ರೂ. ಲಕ್ಷಗಳಲ್ಲಿ

| ಕ್ರ ಸಂ | ವಿವರಣೆ | ವೆಚ್ಚಗಳು ದಿನಾಂಕ:01.11.2012ರಿಂದ 31.03.2013ರವರೆಗೆ |
|---|---|---|
| 01 | ಅಧಿಕಾರಿಗಳ ವೇತನ | 259.57 |
| 02 | ತುಟ್ಟಿಭತ್ಯೆ | 150.98 |
| 03 | ಇತರೆ ಭತ್ಯೆ | 52.97 |
| 04 | ಶಿಷ್ಯವೇತನ (ಯು.ಜಿ ಮತ್ತು ಪಿ.ಜಿ) | 922.29 |
| **ಒಟ್ಟು** | | **555.81** |

ಮಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ವೆಚ್ಚ (ಯೋಜನೇತರ) 2013–14ನೇ ಸಾಲಿನ ವೆಚ್ಚದ ವಿವರ:

**ಲೆಕ್ಕ ಶೀರ್ಷಿಕೆ 2210–05–105–1–40–101 (ಯೋಜನೇತರ)**

ರೂ. ಲಕ್ಷಗಳಲ್ಲಿ

| ಕ್ರ ಸಂ | ವಿವರಣೆ | ವೆಚ್ಚಗಳು ದಿನಾಂಕ:01.11.2012ರಿಂದ 31.03.2013ರವರೆಗೆ |
|---|---|---|
| 01 | ವೇತನ | 141.27 |
| 02 | ಕಛೇರಿ ವೆಚ್ಚ | 73.66 |
| 03 | ಉಪಕರಣಗಳು | 3.74 |
| 04 | ಔಷಧ ಖರೀದಿ | 229.36 |
| 05 | ನಿರ್ವಹಣೆ | 13.62 |
| 06 | ಪಥ್ಯ ಆಹಾರ | 9.56 |
| **ಒಟ್ಟು** | | **471.21** |

ತೀರ್ಮಾನ :- ಮಿಮ್ಸ್ ಸಂಸ್ಥೆಯ ನವೆಂಬರ್-2012ರಿಂದ 31.03.2012ರವರೆಗಿನ ಕಾಲೇಜು ಮತ್ತು ಆಸ್ಪತ್ರೆಯ ಯೋಜನೆ ಹಾಗೂ ಯೋಜನೇತರಡಿಯಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ವೆಚ್ಚ ಭರಿಸಿರುವ ಬಗ್ಗೆ ವಿವರಣೆಯೊಂದಿಗೆ ಮಂಡಿಸಲಾಯಿತು. ಕಟ್ಟಡ ಕಾಮಗಾರಿಗೆ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಯೋಜನೆಯಡಿಯಲ್ಲಿ ಭರಿಸಿರುವ ವೆಚ್ಚಕ್ಕೆ ವಿವರಣೆಯೊಂದಿಗೆ ಮಂಡಿಸಲು ಸೂಚಿಸಿ ಉಳಿದ ವೆಚ್ಚಗಳಿಗೆ ಸ್ಥಿರೀಕರಣ ನೀಡಲಾಯಿತು.

**ವಿಷಯ ಸಂಖ್ಯೆ : 04 2014-15ನೇ ಸಾಲಿಗೆ ತಯಾರಿಸಿರುವ ಆಯವ್ಯಯಕ್ಕೆ ಸಭೆಯ ಅನುಮೋದನೆ ಕೋರುವ ಕುರಿತು.**

ತೀರ್ಮಾನ :- ಸಂಸ್ಥೆಯ ಕಾಲೇಜು ಮತ್ತು ಬೋಧಕ ಆಸ್ಪತ್ರೆಯ 2014-15 ನೇ ಸಾಲಿನ ಆಯವ್ಯಯವನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುವುದನ್ನು ಸಭೆಯಲ್ಲಿ ಅನುಮೋದಿಸಲಾಯಿತು.

07/01/14

**ವಿಷಯ ಸಂಖ್ಯೆ : 05 ಸಂಸ್ಥೆಯ ಬೋಧಕ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಯ 2014-15 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಗೆ ಸಭೆಯ ಅನುಮೋದನೆ ಕೋರಿದೆ.**

ತೀರ್ಮಾನ:- ಸಂಸ್ಥೆಯ ಬೋಧಕ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಯ 2013-14 ನೇ ಸಾಲಿನ ಆರ್ಥಿಕ ವರ್ಷದ ವಿವರಣೆಯೊಂದಿಗೆ ಸಲ್ಲಿಸಲು ಸೂಚಿಸಿ 2014-15 ನೇ ಸಾಲಿನ ಆಯವ್ಯಯವನ್ನು ಮುಂದಿನ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**ವಿಷಯ ಸಂಖ್ಯೆ : 06 ಲೆಕ್ಕ ಪರಿಶೋಧಕರು ಸಲ್ಲಿಸಿರುವ 2010-11 ಮತ್ತು 2011-12ನೇಸಾಲಿನ ಆಡಿಟ್ ವರದಿಯನ್ನು ಅನುಮೋದಿಸುವ ಕುರಿತು.**

ತೀರ್ಮಾನ :- ಲೆಕ್ಕ ಪರಿಶೋಧಕರು ಸಲ್ಲಿಸಿರುವ ಆಡಿಟ್ ವರದಿಯನ್ನು ಪರಿಶೀಲಿಸ ಬೇಕಾಗಿರುವುದರಿಂದ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಅನುಮೋದನೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 07 ಸಂಸ್ಥೆಯ ಅನುದಾನದ ಬಡ್ಡಿ ಹಣದಿಂದ ಸಣ್ಣ ಕಾಮಗಾರಿಗಳಿಗೆ ಪಾವತಿಸಿರುವುದನ್ನು ಅನುಮೋದನೆ ಕೋರಿದೆ.**

ತೀರ್ಮಾನ :- ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಭರಿಸಿರುವ ವೆಚ್ಚಕ್ಕೆ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ: 08 ಸಂಸ್ಥೆಯ ಕಟ್ಟಡ ಕಾಮಗಾರಿ ಪರಿಶೀಲನಾ ಸಭೆಯ ನಡವಳಿಗಳನ್ನು ಅನುಮೋದಿಸುವ ಕುರಿತು.**

ತೀರ್ಮಾನ :- Land utilization plan & Comprehensive plan ಗಳೊಂದಿಗೆ ಸಂಪೂರ್ಣ ವಿವರಗಳನ್ನು ಒಟ್ಟಿಗೆ ಸಲ್ಲಿಸಲು ಸೂಚಿಸಲಾಯಿತು.

**ವಿಷಯ ಸಂಖ್ಯೆ: 09 ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗದ ಯೋಜನೆಯಡಿಯಲ್ಲಿ 2013-14ನೇ ಸಾಲಿನ ಅನುದಾನಕ್ಕೆ ಸಿದ್ಧಪಡಿಸಿರುವ ಕ್ರಿಯಾ ಯೋಜನೆಗೆ ಸಭೆಯ ಅನುಮೋದನೆ ಕೋರಿದೆ.**

ತೀರ್ಮಾನ :- ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಉಪಯೋಜನೆಯಲ್ಲಿ 2013-14ನೇ ಸಾಲಿನ ಅನುದಾನಕ್ಕೆ ಸಲ್ಲಿಸಿದ್ದ ಕ್ರೀಯಾಯೋಜನೆಯಲ್ಲಿ ಕೇಲವು ಮಾರ್ಪಾಡುಗಳನ್ನು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಹಾಗೂ ಲೆಕ್ಕಶೀರ್ಷಿಕೆ 2210 ಯೋಜನೆಯಡಿಯಲ್ಲಿ ತಯಾರಿಸಿರುವ ಕ್ರಿಯಾ ಯೋಜನೆಯಲ್ಲಿ ವಿದ್ಯಾರ್ಥಿಗಳ ಇಂಟರಾನ್ಯಾಷನಲ್ ಸೆಮಿನಾರ್‌ಗಾಗಿ 10 ಲಕ್ಷದ ಮೊತ್ತ ಹಾಗೂ ಜಾಹಿರಾತಿಗಾಗಿ ಭರಿಸುವ 3 ಲಕ್ಷ ಮೊತ್ತಗಳನ್ನು ಹೊರತುಪಡಿಸಿ ಉಳಿದ ಮೊತ್ತಗಳನ್ನು

Rashmi 07/11/14

ಅನುಮೋದಿಸಲಾಯಿತು ಹಾಗೂ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳಿಗೆ ಪಾವತಿಸುವ ಮೆಸ್‌ಬಿಲ್ ಮರುಪಾವತಿಯನ್ನು ಈ ಕ್ರಿಯಾ ಯೋಜನೆಯಲ್ಲಿ ಸೇರಿಸಲು ~~ಸೂಚಿಸಲಾಯಿತು.~~ ನಿರ್ಧರಿಸಲಾಯಿತು. 4210 ಲೆಕ್ಕಶೀರ್ಷಿಕೆಯಡಿಯಲ್ಲಿನ ಅನುದಾನದಲ್ಲಿ 4 ನೇ ಮಹಡಿಯಲ್ಲಿ ಸೆಮಿನಾರ್ ಹಾಲ್ ನಿರ್ಮಾಣ, ಸುಟ್ಟಗಾಯಗಳ ವಾರ್ಡ್ ನಿರ್ಮಾಣ, ಆಸ್ಪತ್ರೆಯಲ್ಲಿನ ಶಸ್ತ್ರಚಿಕಿತ್ಸಾ ಕೊಠಡಿಯ ರಿಪೇರಿ ಹಾಗೂ ಅಗ್ನಿ ನಿರೋಧಕ ಉಪರಕಣಗಳನ್ನು ಅಳವಡಿಸಲು ಭರಿಸುವ ಮೊತ್ತಗಳನ್ನು ಸಭೆಯಲ್ಲಿ ಅನುಮೋದಿಸಲಾಯಿತು. ಬಾಲಕ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಬೋರ್‌ವೆಲ್ ಕೊರೆಸಲು ಕೌಂಪೌಂಡ್ ನಿರ್ಮಾಣ ಮೊತ್ತ, ಕೀಲು ಮತ್ತು ಮೂಳೆ ವಿಭಾಗದಲ್ಲಿ ಅಲ್ಯೂಮಿನಿಯಂ ಪಾರ್ಟಿಷನ್ ಕಾಮಗಾರಿ ಕ್ಯಾನ್ಸರ್ ಆಸ್ಪತ್ರೆಯ ಕಟ್ಟಡದ ಮೊದಲ ಹಂತಸ್ತಿನಲ್ಲಿ ನಿರ್ಮಿಸಿರುವ ಮಕ್ಕಳ ವಾರ್ಡ್ ಕಾಮಗಾರಿ ಹಾಗೂ ವೈದ್ಯಕೀಯ ವಿಭಾಗದಲ್ಲಿ ಶೆಲ್ಟರ್ ನಿರ್ಮಾಣ ಮೊತ್ತಗಳನ್ನು ಕೈಬಿಡಲಾಯಿತು. ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿ Wardrobes ಇಲ್ಲದೇ ಇರುವುದರಿಂದ ಸದರಿ ಕಾಮಗಾರಿ ವೆಚ್ಚವನ್ನು ಭರಿಸುವುದಾಗಿ ನಮೂದಿಸಿರುವುದನ್ನು ಚರ್ಚಿಸಿ ಈ ಬಗ್ಗೆ ಪರಿಶೀಲಿಸಿ ಕಟ್ಟಡ ಕಾಮಗಾರಿಯ ನಕ್ಷೆಯಲ್ಲಿ ಹಾಗೂ ಬಿಲ್‌ಗಳ ಪಾವತಿಯಲ್ಲಿ ಈ ಕಾಮಗಾರಿಯನ್ನು ಅಳವಡಿಸಲಾಗಿದೆಯೇ ಎಂದು ಖಚಿತ ಪಡಿಸಿಕೊಂಡು ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**ವಿಷಯ ಸಂಖ್ಯೆ: 10 ಸಂಸ್ಥೆಯ ಕಟ್ಟಡಗಳಿಗೆ ಅಗ್ನಿ ನಿರೋಧಕ ಉಪಕರಣಗಳನ್ನು ಅಳವಡಿಸಲು ಸಭೆಯ ಅನುಮೋದನೆ ಕೋರಿದೆ.**

**ತೀರ್ಮಾನ** :- ವಿಷಯವನ್ನು ಎಸ್‌ಸಿಪಿ & ಟಿಎಸ್‌ಪಿ ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿರುತ್ತದೆ.

**ವಿಷಯ ಸಂಖ್ಯೆ: 11 ಬೋಧಕ ಆಸ್ಪತ್ರೆಯಲ್ಲಿ ಸುಟ್ಟಗಾಯಗಳ ಚಿಕಿತ್ಸಾ ವಾರ್ಡ್ ತೆರೆಯಲು ಹಾಗೂ ಐಸೋಲೇಷನ್ ವಾರ್ಡ್ ರಿಪೇರಿಗಾಗಿ ಸಭೆಯ ಅನುಮೋದನೆ ಕೋರಿದೆ.**

**ತೀರ್ಮಾನ** :- ವಿಷಯವನ್ನು ಎಸ್‌ಸಿಪಿ & ಟಿಎಸ್‌ಪಿ ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿರುತ್ತದೆ.

**ವಿಷಯ ಸಂಖ್ಯೆ: 12 ಬೋಧಕ ಆಸ್ಪತ್ರೆಯ ಹೊರರೋಗಿ ವಿಭಾಗಗಳ ಕೊಠಡಿಗಳನ್ನು ವಿಸ್ತರಿಸುವ ಬಗ್ಗೆ ಸಭೆಯ ಅನುಮೋದನೆ ಕೋರಿದೆ.**

**ತೀರ್ಮಾನ** :- ವಿಷಯವನ್ನು ಕೈಬಿಡಲಾಯಿತು.

07/01/14

<u>ವಿಷಯ ಸಂಖ್ಯೆ:</u> 13 **ಸಂಸ್ಥೆಯ ಬೋಧಕ ಆಸ್ಪತ್ರೆಯ ಕಟ್ಟಡಕ್ಕೆ ಬಣ್ಣ ಹಚ್ಚುವ ಕಾಮಗಾರಿಗಾಗಿ ಸಭೆಯ ಅನುಮೋದನೆ ಕೋರಿದೆ.**

**<u>ತೀರ್ಮಾನ</u>** :- ಕಾಮಗಾರಿಯ ಬಗ್ಗೆ ನಿಖರವಾದ ಮಾಹಿತಿಯನ್ನು ಒದಗಿಸಲು ತಿಳಿಸಲಾಯಿತು. ಸದರಿ ಕಟ್ಟಡಕ್ಕೆ ಬಣ್ಣ ಹಚ್ಚಿದ ಅವಧಿ, ಖರ್ಚು ಮಾಡಿರುವ ವೆಚ್ಚ ಹಾಗೂ ಈಗ ಸದರಿ ಕಾಮಗಾರಿಗಾಗಿ ಬೇಕಾಗಿರುವ ಅನುದಾನದ ಮೊತ್ತವನ್ನು ವಿವರದೊಂದಿಗೆ ಮುಂದಿನ ಸಭೆಯಲ್ಲಿ ನೀಡಲು ಸೂಚಿಸಲಾಯಿತು.

<u>ವಿಷಯ ಸಂಖ್ಯೆ:</u> 14 **ಸಂಸ್ಥೆಯ ಕಾಲೇಜು ಕಟ್ಟಡಕ್ಕೆ ಬಣ್ಣ ಹಚ್ಚುವ ಕಾಮಗಾರಿಗಾಗಿ ಸಭೆಯ ಅನುಮೋದನೆ ಕೋರಿದೆ.**

**<u>ತೀರ್ಮಾನ</u>** :- ಸದರಿ ಕಾಮಗಾರಿಗಾಗಿ ಅಂದಾಜು ಪಟ್ಟಿಯನ್ನು ಪಡೆದು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

<u>ವಿಷಯ ಸಂಖ್ಯೆ:</u> 15 **ಸಂಸ್ಥೆಯ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಕುರಿತು.**

**<u>ತೀರ್ಮಾನ</u>** :- ಪೂರ್ಣ ವಿವರಣೆಯೊಂದಿಗೆ ಅಂದಾಜು ಪಟ್ಟಿಯನ್ನು ಪಡೆದು ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

<u>ವಿಷಯ ಸಂಖ್ಯೆ:</u> 16 **ವೈದ್ಯಶಾಸ್ತ್ರ ವಿಭಾಗದಲ್ಲಿ ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸುವ ಕೊಠಡಿಗೆ 10 ಕೆ.ವಿ.ಎ ಸಾಮರ್ಥ್ಯದ (02 ಸಂಖ್ಯೆ) ಯು.ಪಿ.ಎಸ್‌ಗಳನ್ನು ಖರೀದಿಸಲು ಸಭೆಯ ಅನುಮೋದನೆ ಕೋರಿದೆ.**

**<u>ತೀರ್ಮಾನ</u>** :- ವಿಷಯದ ಬಗ್ಗೆ ಚರ್ಚಿಸಿ, ಡಯಾಲಿಸಿಸ್ ಯಂತ್ರವನ್ನು ಅಳವಡಿಸಲು ತೆಗೆದುಕೊಂಡಿರುವ ಕ್ರಮದ ವಿವರ ಹಾಗೂ ವಿಭಾಗದಲ್ಲಿ ಉಪಯೋಗಿಸುತ್ತಿರುವ ಯಂತ್ರಗಳ ಮತ್ತು ಯು.ಪಿ.ಎಸ್ ಸಾಮರ್ಥ್ಯದ ಬಗ್ಗೆ ವಿವರವಾದ ವಿವರಣೆಯೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

<u>ವಿಷಯ ಸಂಖ್ಯೆ:</u> 17 **ಸಂಸ್ಥೆಯ ಬೋಧಕ ಆಸ್ಪತ್ರೆಯ ಐ.ಸಿ.ಯು ವಾರ್ಡ್‌ಗಳಿಗೆ ಮಂಚಗಳನ್ನು ಖರೀದಿಸಲು ಸಭೆಯ ಅನುಮೋದನೆ ಕೋರಿದೆ.**

**<u>ತೀರ್ಮಾನ:-</u>** ಬೋಧಕ ಆಸ್ಪತ್ರೆಯಲ್ಲಿನ ಐಸಿಯು ವಾರ್ಡಿನಲ್ಲಿ ಈಗ ಹಾಲಿ ಇರುವ ಮಂಚಗಳ ಸಂಖ್ಯೆಗಳನ್ನು ನಮೂದಿಸಿ ಹಾಗೂ ಈಗ ಕೋರಿರುವ ಮಂಚಗಳ ಅಗತ್ಯತೆ ಬಗ್ಗೆ ವಿವರವಾದ ವರದಿಯೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ತಿಳಿಸಲಾಯಿತು. Rashmi V. 07/01/14

**ವಿಷಯ ಸಂಖ್ಯೆ: 18 ಸಂಸ್ಥೆಯ ಬೋಧಕ ಆಸ್ಪತ್ರೆಯ ಮಕ್ಕಳ ವಿಭಾಗದ ಮಕ್ಕಳ ತುರ್ತುಚಿಕಿತ್ಸಾ ಘಟಕಕ್ಕೆ (PICU) ಅವಶ್ಯಕವಿರುವ ಉಪಕರಣಗಳನ್ನು ಖರೀದಿಸಲು ಸಭೆಯ ಅನುಮೋದನೆ ಕೋರಿದೆ.**

ತೀರ್ಮಾನ :- ಎಂ.ಸಿ.ಐ ನಿಯಮದಂತೆ ಮಕ್ಕಳ ತುರ್ತು ಚಿಕಿತ್ಸಾ ಘಟಕಕ್ಕೆ **PICU**ಅಗತ್ಯತೆ ಇರುವ ಉಪಕರಣಗಳನ್ನು ಖರೀದಿ ಮಾಡಲು ಸಂಪೂರ್ಣ ವಿವರಗಳೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ತಿಳಿಸಲಾಯಿತು.

**ವಿಷಯ ಸಂಖ್ಯೆ: 19 ಸಂಸ್ಥೆಯ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಅವಶ್ಯಕವಿರುವ ಉಪಕರಣಗಳನ್ನು ಖರೀದಿಸಲು ಸಭೆಯ ಅನುಮೋದನೆ ಕೋರಿದೆ.**

ತೀರ್ಮಾನ :- ವಿವರವಾದ ವರದಿಯನ್ನು ವೈದ್ಯಕೀಯ ಅಧೀಕ್ಷಕರಿಂದ ಪಡೆದು ಮುಂದಿನ ಸಭೆಯಲ್ಲಿ ಮಂಡಿಸಲು ತಿಳಿಸಲಾಯಿತು.

**ವಿಷಯ ಸಂಖ್ಯೆ: 19 (ಎ) ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ತುರ್ತುಚಿಕಿತ್ಸಾ ವಾಹನವನ್ನು (Ambulance) ಖರೀದಿಸಲು ಸಭೆಯ ಅನುಮೋದನೆ ಕೋರಿದೆ.**

ತೀರ್ಮಾನ :- ಈ ಬಗ್ಗೆ ವೈದ್ಯಕೀಯ ಅಧೀಕ್ಷಕರಿಂದ ಹಾಲಿ ಇರುವ **Ambulance** ನ ವಿವರದೊಂದಿಗೆ ಹಾಗೂ ಖರೀದಿಸಲು ಬಯಸುತ್ತಿರುವ ಅಗತ್ಯತೆ ಬಗ್ಗೆ ವಿವರವಾದ ವರದಿಯೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ತಿಳಿಸಲಾಯಿತು.

**ವಿಷಯ ಸಂಖ್ಯೆ: 20 ಬೋಧಕ ಆಸ್ಪತ್ರೆಯ ಅರವಳಿಕೆ ಶಾಸ್ತ್ರ ವಿಭಾಗದ ತೀವ್ರ ನಿಗಾಘಟಕ (ICU) ನ Ventilator ಗಳನ್ನು ಉನ್ನತೀಕರಿಸಲು ಸಭೆಯ ಅನುಮೋದನೆ ಕೋರಿದೆ.**

ತೀರ್ಮಾನ :- ವಿಷಯವನ್ನು ತಃಖ್ತೆಯಲ್ಲಿ ನಮೂದಿಸಿ ವಿವರದೊಂದಿಗೆ ಸಲ್ಲಿಸಲು ತಿಳಿಸಲಾಯಿತು.

**ವಿಷಯ ಸಂಖ್ಯೆ: 21 ಸಂಸ್ಥೆಯ ಜೀವರಸಾಯನಶಾಸ್ತ್ರ ವಿಭಾಗಕ್ಕೆ Cobas Auto Analyser ನ್ನು Reagent rental ವ್ಯವಸ್ಥೆಯಲ್ಲಿ ಉಪಕರಣವನ್ನು ಪಡೆಯಲು ಸಭೆಯ ಅನುಮೋದನೆ ಕೋರಿದೆ.**

ತೀರ್ಮಾನ :- ಈ ಬಗ್ಗೆ ವಿವರವಾದ ವರದಿಯೊಂದಿಗೆ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ತಿಳಿಸಲಾಯಿತು. Rnhill 07/01/14

**<u>ವಿಷಯ ಸಂಖ್ಯೆ</u>: 22 ಸಂಸ್ಥೆಯ ರೋಗಲಕ್ಷಣ ವಿಭಾಗದಲ್ಲಿ Hematology Cell Counter ನ್ನು ಬೈಬ್ಯಾಕ್ ಸಿಸ್ಟಮ್‌ನಲ್ಲಿ ಖರೀದಿಸಲು ಸಭೆಯ ಅನುಮೋದನೆ ಕೋರಿದೆ.**

<u>ತೀರ್ಮಾನ</u> :- ಕೆಟಿಪಿಪಿ ಆಕ್ಟ್‌ನಲ್ಲಿ ಬೈಬ್ಯಾಕ್ ಸಿಸ್ಟ್‌ಮ್‌ನಲ್ಲಿ ಖರೀದಿಸುವ ಪ್ರಕ್ರಿಯೆ ಇಲ್ಲದಿರುವ ಕಾರಣ ವಿಷಯವನ್ನು ಕೈಬಿಡಲಾಯಿತು.

**<u>ವಿಷಯ ಸಂಖ್ಯೆ</u>: 23 ಸಂಸ್ಥೆಯ ವಿಭಾಗಗಳಿಗೆ ಮತ್ತು ಬೋಧಕ ಆಸ್ಪತ್ರೆಯ ವಾರ್ಡ್‌ಗಳಿಗೆ ಇಂಟರ್‌ಕಾಮ್ ಸೇವೆಯನ್ನು ಒದಗಿಸಲು ಸಭೆಯ ಅನುಮೋದನೆ ಕೋರಿದೆ.**

<u>ತೀರ್ಮಾನ</u> :- KTPP Act ನಂತೆ ಟೆಂಡರ್ ಪ್ರಕ್ರಿಯೆ ಕೈಗೊಂಡು ಇಂಟರ್ ಕಾಮ್ ಸೇವೆಯನ್ನು ಪಡೆಯಲು ಸಭೆಯಲ್ಲಿ ಅನುಮೋದಿಸಲಾಯಿತು.

**<u>ವಿಷಯ ಸಂಖ್ಯೆ</u>: 24 ಸಂಸ್ಥೆಯ ವಿಭಾಗಗಳಿಗೆ ಅವಶ್ಯವಿರುವ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಖರೀದಿಸಲು ಸಭೆಯ ಅನುಮೋದನೆ ಕೋರಿದೆ.**

<u>ತೀರ್ಮಾನ</u> :- ರಾಷ್ಟ್ರೀಯಾ ಸೂಚನಾ ವಿಜ್ಞಾನ ಕೇಂದ್ರ ಇಲಾಖೆಯಿಂದ ಮಾಹಿತಿ ಪಡೆದು ~~ನಿಯಮದಂತೆ ಖರೀದಿಸಲು ಸಭೆಯಲ್ಲಿ ಅನುಮೋದಿಸಲಾಯಿತು.~~ System Requirement Study ...

**<u>ವಿಷಯ ಸಂಖ್ಯೆ</u>: 25 ಸೋಲಾರ್ ಆಫ್‌ಗ್ರಿಡ್ ಮತ್ತು ಡಿಸೆಂಟ್ರಲೈಸ್ಡ್ ಪ್ಲಾಂಟ್‌ನ್ನು ಮಿಮ್ಸ್ ಆವರಣದಲ್ಲಿ ಅಳವಡಿಸುವ ಕುರಿತು.**

<u>ತೀರ್ಮಾನ</u> :- ಸೋಲಾರ್ ಆಫ್‌ಗ್ರಿಡ್ ಮತ್ತು ಸಿಸೆಂಟ್ರಲೈಸ್ಡ್ ಪ್ಲಾಂಟ್‌ನ್ನು ಆಳವಡಿಸಿದರೂ ಸಹ ವಿದ್ಯುತ್ ಬಿಲ್‌ಗಳ ಪಾವತಿಯು ಅವಶ್ಯವಿರುವುದರಿಂದ ಹಾಗೂ ವಿದ್ಯುತ್‌ನ್ನು ಶೇಖರಿಸಲು ವ್ಯವಸ್ಥೆ ಇಲ್ಲದಿರುವುದರಿಂದ ಸದರಿ ಪ್ಲಾಂಟ್‌ನ್ನು ಅಳವಡಿಸುವ ವಿಷಯವನ್ನು ಕೈಬಿಡಲಾಯಿತು.

**<u>ವಿಷಯ ಸಂಖ್ಯೆ</u>: 26 ಗ್ರಂಥಾಲಯದ ವೈದ್ಯಕೀಯ ಪುಸ್ತಕಗಳನ್ನು ಮತ್ತು ನಿಯತಕಾಲಿಕೆಗಳನ್ನು ಖರೀದಿಸಲು ಸಭೆಯ ಅನುಮೋದನೆ ಕುರಿತು.**

<u>ತೀರ್ಮಾನ</u> :- ಖರೀದಿಸಲು ಅಗತ್ಯತೆ ಇರುವ ಪುಸ್ತಕಗಳ along with existing stock details ಹಾಗೂ ನಿಯತಕಾಲಿಕೆಗಳ ಪಟ್ಟಿಯನ್ನು ಸಿದ್ಧಪಡಿಸಿ ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**<u>ವಿಷಯ ಸಂಖ್ಯೆ</u>: 27 ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಉಪದಾನ (ಗ್ರಾಚುಟಿ) ನೀಡುವ ಕುರಿತು.**

<u>ತೀರ್ಮಾನ</u> :- ವಿಷಯದ ಬಗ್ಗೆ ಪ್ರತ್ಯೇಕ ಕಡತವನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಯಿತು.

07/01/14

**ವಿಷಯ ಸಂಖ್ಯೆ : 28 ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ಮೊಬೈಲ್ ಭತ್ಯೆ ಮಂಜೂರು ಮಾಡುವ ಕುರಿತು.**

PRO ಗೆ

**ತೀರ್ಮಾನ** :- ~~ಅಧಿಕಾರಿಗಳಿಗೆ~~ ಮಾಹೆಯಾನ ರೂ.500/-ಗಳ ಮೊಬೈಲ್ ಭತ್ಯೆಯನ್ನು ಮಂಜೂರು ಮಾಡಲು ಸಭೆಯಲ್ಲಿ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ: 29 ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಹೊರಗುತ್ತಿಗೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 'ಸಿ' ಗ್ರೂಪ್ ನೌಕರರಿಗೆ ವೇತನ ನಿಗಧಿಪಡಿಸಲು ಸಭೆಯ ಅನುಮೋದನೆ ಕೋರಿದೆ.**

**ತೀರ್ಮಾನ** :- ಬೋಧಕ ಆಸ್ಪತ್ರೆಯಲ್ಲಿ ಹೊರಗುತ್ತಿಗೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 31 ಗ್ರೂಪ್ ಸಿ ನೌಕರರರಿಗೆ ಮಾಹೆಯಾನ ರೂ.8000+ಪಿಎಫ್+ಇಎಸ್ಐ ಸೇರಿಸಿ ವೇತನ ನಿಗಧಿಪಡಿಸಲು ಸಭೆಯಲ್ಲಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ: 30(ಎ) ಸಂಸ್ಥೆಯಲ್ಲಿನ ಖಾಲಿಯಿರುವ ತಂತ್ರಜ್ಞರು ಹಾಗೂ ಶುಶ್ರೂಷಕರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಸಭೆಯ ಅನುಮೋದನೆ ಕೋರಿದೆ.**

**ತೀರ್ಮಾನ** :- ಶುಶ್ರೂಷಕರನ್ನು ಹೊರತುಪಡಿಸಿ ತಂತ್ರಜ್ಞರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲು KTPP Act ನಂತೆ tender ಕರೆಯಲು ~~ಮಾಡಿಕೊಳ್ಳಲು~~ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ: 31 ಸಂಸ್ಥೆಯಲ್ಲಿನ ಮ್ಯೂಸಿಯಂ ಕ್ಯೂರೇಟರ್ ಹುದ್ದೆಯನ್ನು ಸೃಜಿಸಲು ಸಭೆಯ ಅನುಮೋದನೆ ಕೋರಿದೆ.**

**ತೀರ್ಮಾನ** :- ಹುದ್ದೆಯ ಬಗ್ಗೆ ಎಂಸಿಐ ನಿಯಮಾವಳಿಯಲ್ಲಿ ಅಗತ್ಯತೆ ಬಗ್ಗೆ ನಮೂದಿಸಿದ್ದಲ್ಲಿ ~~[illegible]~~ ಮುಂದಿನ ಸಭೆಯಲ್ಲಿ ಮಂಡಿಸಲು ತಿಳಿಸಲಾಯಿತು.

**ವಿಷಯ ಸಂಖ್ಯೆ: 32 ಸಂಸ್ಥೆಗೆ ಕಛೇರಿ ಅಧೀಕ್ಷಕರ ಹುದ್ದೆಯನ್ನು ಸೃಜಿಸಲು ಸಭೆಯ ಅನುಮೋದನೆ ಕೋರಿದೆ.**

**ತೀರ್ಮಾನ** :- ಭಾರತೀಯ ವೈದ್ಯಕೀಯ ಮಂಡಳಿ ನಿಯಮಾವಳಿಗಳಲ್ಲಿ ವೈದ್ಯಕೀಯ ಕಾಲೇಜುಗಳಿಗೆ ಅಗತ್ಯತೆ ಇರುವ ಬೋಧಕೇತರ ಸಿಬ್ಬಂದಿಗಳ ಪಟ್ಟಿಯಲ್ಲಿ ಕಛೇರಿ ಅಧೀಕ್ಷಕರ ಹುದ್ದೆಯನ್ನು ನಮೂದಿಸಿದ್ದಲ್ಲಿ ~~[illegible]~~ ಮುಂದಿನ ಸಭೆಯಲ್ಲಿ ಮಂಡಿಸಲು ತಿಳಿಸಲಾಯಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | | |
|---|---|---|
| ಆರ್ಥಿಕ ಸಲಹೆಗಾರರು ಹಾಗೂ, ಸದಸ್ಯ ಕಾರ್ಯದರ್ಶಿಗಳು, ಆರ್ಥಿಕ ಸಮಿತಿ ಮಿಮ್ಸ್, ಮಂಡ್ಯ | ನಿರ್ದೇಶಕರು ಹಾಗೂ ಸದಸ್ಯರು, ಆರ್ಥಿಕ ಸಮಿತಿ, ಮಿಮ್ಸ್, ಮಂಡ್ಯ. | 07/01/14 ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಹಾಗೂ ಅಧ್ಯಕ್ಷರು ಆರ್ಥಿಕ ಸಮಿತಿ, ಮಿಮ್ಸ್, ಮಂಡ್ಯ. |